# ಪುರಸೊತ್ತಿಲ್ಲದ ಹಾಗೆ ಕಟ್ಟಿಕೊಂಡ ಪುಕ್ಸಟ್ಟೆ ಲೈಫು!

ರಂಗಭೂಮಿಯಿಂದ ಸಿನಿಮಾ ಕ್ಷೇತ್ರಕ್ಕೆ ಬಂದಿರುವ **ಅರವಿಂದ ಕುಪ್ಲೀಕರ್** 'ಪುಕ್ಸಟ್ಟೆ ಲೈಫು' ಸಿನಿಮಾದ ಮೂಲಕ ಪ್ರೇಕ್ಷಕರ ಎದುರು ಬರಲು ಸಜ್ಜಾಗಿದ್ದಾರೆ.

**ಪದ್ಮನಾಭ ಭಟ್**

'ಪುಕ್ಸಟ್ಟೆ ಲೈಫಲ್ಲಿ ಪುರಸೊತ್ತೆ ಇಲ್ಲ; ದುಡ್ಡಿಲ್ಲದವರಿಗೆ ಉಳಿಗಾಲವಿಲ್ಲ' ಹೀಗೆ ಶುರುವಾಗುವ ಹಾಡು ಸಾಹಿತ್ಯದಲ್ಲಿನ ವಿಡಂಬನೆ ಮತ್ತು ದೃಶ್ಯದಲ್ಲಿನ ವಿಭಿನ್ನತೆ ಎರಡರಿಂದಲೂ ಗಮನಸೆಳೆಯುತ್ತದೆ. ಹೀಗೆ 'ಪುಕ್ಸಟ್ಟೆ ಲೈಫ್' ಅನ್ನು ಕೈಯಲ್ಲಿ ಹಿಡಿದುಕೊಂಡು ಪುರಸೊತ್ತೇ ಇಲ್ಲದ ಹಾಗೆ ಅಡ್ಡಾಡುತ್ತಿರುವವರು ಅರವಿಂದ್ ಕುಪ್ಲೀಕರ್. ಅಂದಹಾಗೆ, ಅವರ ನಿರ್ದೇಶನದ ಮೊದಲ ಸಿನಿಮಾದ ಹೆಸರು 'ಪುಕ್ಸಟ್ಟೆ ಲೈಫು'. ಹಾಗೆಂದು ಅರವಿಂದ್ ಅವರ ಲೈಫೇನೂ ಪುಕ್ಸಟ್ಟೆಯಾಗಿ ದಕ್ಕಿದ್ದಲ್ಲ.

ಬೆಂಗಳೂರಿನಲ್ಲೇ ಹುಟ್ಟಿ ಬೆಳೆದ ಅರವಿಂದ್, ಓದಿದ್ದು ಮೆಕ್ಯಾನಿಕಲ್ ಡಿಪ್ಲೊಮಾ ಮತ್ತು ಕನ್ನಡ ಎಂ.ಎ. ಕಾಲೇಜು ದಿನಗಳಿಂದಲೇ ರಂಗಭೂಮಿಯ ಒಡನಾಟ ಸಿಕ್ಕಿತ್ತು. ಬಿ. ಜಯಶ್ರೀ ಅವರ 'ಸ್ಪಂದನ' ರಂಗತಂಡದಲ್ಲಿ ನಟನೆಯ ದೀಕ್ಷೆ ಸಿಕ್ಕಿತು. ನಂತರ 'ಸಂಚಾರಿ' ರಂಗತಂಡದ ಜೊತೆಗೂ ತೊಡಗಿಕೊಂಡರು.

ರಂಗವ್ಯಾಮೋಹದಲ್ಲಿಯೇ ದಿನಗಳನ್ನು ಕಳೆಯುತ್ತಿದ್ದ ಅರವಿಂದ್‌ಗೆ ಸಿನಿಮಾಗೆ ಬರುವ ಕನಸೇನೂ ಇರಲಿಲ್ಲ. ಒಮ್ಮೆ ದೆಹಲಿಗೆ ಹೋಗುವಾಗ ವಿಮಾನದಲ್ಲಿ ಕೂತು ಅವರು ಮೊಬೈಲ್‌ನಲ್ಲೇ ಚಿತ್ರೀಕರಿಸಿದ ಒಂದು ದೃಶ್ಯವನ್ನು ನೋಡಿದ ಬಿ. ಜಯಶ್ರೀ, 'ತುಂಬ ಚೆನ್ನಾಗಿದೆ. ನೀನ್ಯಾಕೆ ಸಿನಿಮಾಟೊಗ್ರಫಿ ಕಲಿಯಬಾರದು?' ಎಂದು ಕೇಳಿದ್ದರು. ಇದೇ ಹುಮ್ಮಸ್ಸಿನಲ್ಲಿ ಅರವಿಂದ್, ಹಿರಿಯ ಸಿನಿಮಾಟೊಗ್ರಾಫರ್ ಜಿ.ಎಸ್. ಭಾಸ್ಕರ್ ಅವರ ಬಳಿ ಹೋಗಿ ಕೇಳಿಕೊಂಡರು. ಆಗ ಭಾಸ್ಕರ್, 'ನೀನ್ಯಾಕೆ ಸಿನಿಮಾಟೊಗ್ರಫಿ ಕಲಿಯುತ್ತೀಯಾ? ನೀನು ನಟ. ನಿರ್ದೇಶನವನ್ನು ಕಲಿತುಕೋ' ಎಂದು ಸಲಹೆ ನೀಡಿದರು. ಅವರ ಸಲಹೆಯಂತೆಯೇ ಚೆನ್ನೈನ ಎಲ್.ವಿ. ಪ್ರಸಾದ್ ಸಿನಿಮಾ ಆ್ಯಂಡ್ ಟೆಲಿವಿಷನ್ ಅಕಾಡೆಮಿಗೆ ಹೋಗಿ ಎರಡು ವರ್ಷದ ಕೋರ್ಸ್ ಕೂಡ ಮಾಡಿದರು ಅರವಿಂದ್. ಅಲ್ಲಿ ಅಂತಿಮ ವರ್ಷದಲ್ಲಿದ್ದಾಗ ಜಯಂತ ಕಾಯ್ಕಿಣಿ ಅವರ 'ಕನ್ನಡಿ ಇಲ್ಲದ ಊರಿನಲ್ಲಿ' ಕಥೆಯನ್ನು ಆಧರಿಸಿದ 'ಅಮೂರ್ತ' ಎಂಬ ಕಿರುಚಿತ್ರವನ್ನು ನಿರ್ದೇಶಿಸಿದರು.

ಕೋರ್ಸ್ ಮುಗಿಯುತ್ತಿದ್ದ ಹಾಗೆಯೇ ಪ್ರಕಾಶ್ ರೈ ಅವರ ಜೊತೆ 'ಒಗ್ಗರಣೆ' ಸಿನಿಮಾದಲ್ಲಿ ಸಹನಿರ್ದೇಶಕನಾಗಿ ಕೆಲಸ ಮಾಡುವ ಅವಕಾಶ ಸಿಕ್ಕಿತು. ಆ ಸಿನಿಮಾಗೆ ಸಂಭಾಷಣೆಯನ್ನೂ ಬರೆದರು. ಅವರೇ ತಮ್ಮ ಮುಂದಿನ ಸಿನಿಮಾ 'ಇದೊಳ್ಳೆ ರಾಮಾಯಣ'ದಲ್ಲಿ ಒಂದು ಮುಖ್ಯಪಾತ್ರದಲ್ಲಿ ಅಭಿನಯಿಸುವ ಅವಕಾಶವನ್ನೂ ಕೊಟ್ಟರು. ಹೀಗೆ ನಿರ್ದೇಶನ ಮತ್ತು ನಟನೆಯನ್ನು ಒಟ್ಟೊಟ್ಟಿಗೇ ತೂಗಿಸುತ್ತ ಬಂದಿರುವ ಅರವಿಂದ್, ಪಿ. ಶೇಷಾದ್ರಿ ಅವರ 'ಮೂಕಜ್ಜಿಯ ಕನಸು' ಚಿತ್ರದಲ್ಲಿಯೂ ಮುಖ್ಯಪಾತ್ರದಲ್ಲಿ ನಟಿಸಿದ್ದಾರೆ.

'ಪುಕ್ಸಟ್ಟೆ ಲೈಫು' ಅರವಿಂದ್ ಕುಪ್ಲೀಕರ್ ನಿರ್ದೇಶನದ ಮೊದಲ ಸಿನಿಮಾ. 'ಸಂಚಾರಿ ವಿಜಯ್ ಹೇಳಿದ ಒನ್‌ಲೈನ್ ನನಗೆ ತುಂಬ ಇಷ್ಟವಾಯ್ತು. ಆ ಕಥೆ ಎಂ.ಎಸ್. ರಮೇಶ್ ಅವರ ಕೈಯಲ್ಲಿತ್ತು. ಅವರನ್ನು ಕೇಳಿ ಅನುಮತಿ ಪಡೆದುಕೊಂಡು ನಾನೇ ಒಂದು ಚಿತ್ರಕಥೆಯನ್ನು ರಚಿಸಿದೆ. ಇದೊಂದು ಡಾರ್ಕ್ ಕಾಮಿಡಿ ಸಿನಿಮಾ. ಚಿತ್ರದುದ್ದಕ್ಕೂ ನಗಿಸುತ್ತೇವೆ. ಆದರೆ ನಗಿಸುತ್ತ ನಗಿಸುತ್ತಲೇ ಕೊನೆಗೆ ಕಪಾಳಕ್ಕೆ ಹೊಡೆದ ಹಾಗಿರುತ್ತದೆ' ಎಂದು ತಮ್ಮ ಮೊದಲ ಸಿನಿಮಾದ ಕುರಿತು ಹೇಳುತ್ತಾರೆ ಅರವಿಂದ್. ಈ ಚಿತ್ರದಲ್ಲಿ ಸಂಚಾರಿ ವಿಜಯ್ ನಟಿಸಿದ್ದಾರೆ. ಅದ್ವೈತ ಗುರುಮೂರ್ತಿ ಛಾಯಾಗ್ರಹಣ ಮಾಡಿದ್ದಾರೆ. ಸಂಚಾರಿ ತಂಡದ ಮಂಗಳಾ ಅವರೂ ಚಿತ್ರತಂಡದ ಜೊತೆಗಿದ್ದಾರೆ. ಈ ಚಿತ್ರಕ್ಕೆ ಹಣ ಹೂಡಿರುವ ನಾಗರಾಜ ಸೋಮಯಾಜಿ ಕೂಡ ಸಂಚಾರಿ ತಂಡದವರೇ. 'ಹಾಗಾಗಿ ಇದೊಂಥರ ಸಂಚಾರಿ ಪ್ರೊಡಕ್ಟ್ ಅನ್ನಬಹುದು' ಎಂದು ನಗುತ್ತಾರೆ ಅರವಿಂದ್.

ಮೊದಲ ಯತ್ನಕ್ಕೆ ಜನರು ಹೇಗೆ ಸ್ಪಂದಿಸುತ್ತಾರೆ ಎಂಬ ಕುತೂಹಲದ ಜೊತೆಗೇ ಇನ್ನಷ್ಟು ಭಿನ್ನ ಕಥೆಗಳನ್ನೂ ಸಿದ್ಧ ಮಾಡಿಟ್ಟುಕೊಂಡಿದ್ದಾರೆ ಅರವಿಂದ್. 'ಒಂದು ಲವ್ ಸ್ಟೋರಿ ಮತ್ತೊಂದು ಮಾಸ್ ಸಿನಿಮಾ ಎರಡು ಕಥೆ ಇದೆ ನನ್ನ ಬಳಿ. ಎರಡೂ ರೂಢಿಗತ ಜಾಡಿನಿಂದ ಭಿನ್ನವಾಗಿವೆ. ನಿರ್ಮಾಪಕರಿಗಾಗಿ ಹುಡುಕುತ್ತಿದ್ದೇನೆ' ಎನ್ನುವ ಅರವಿಂದ್ ಕನ್ನಡಕ್ಕೆ ಹೊಸ ಪ್ರಕಾರದ ಸಿನಿಮಾಗಳನ್ನು ಕೊಡುವ ಉಮೇದಿನಲ್ಲಿದ್ದಾರೆ.

